ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಕಛೇರಿಯ ಹಾಮಗಾರಿಗೆ ತಗಲುವ ವೆಚ್ಚ.

1618(1930) ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಕಛೇರಿಯ ಲಿಫ್ಟ್ ಹಾಗೂ 3ನೇ ಹಂತದ ಕಟ್ಟಡಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು?

ಶ್ರೀ ಉಮೇಶ್ ವಿ. ಕತ್ತಿ (ಲೋಕೋಪಯೋಗಿ ಸಚಿವರು) :—

1) ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ಕಛೇರಿ ಕಟ್ಟಡಕ್ಕೆ ಲಿಫ್ಟ್ ಅಳವಡಿಸುವುದಕ್ಕಾಗಿ ಸಿವಿಲ್ ಹಾಮಗಾರಿಗಳಿಗಾಗಿ ರೂ. 5.87 ಲಕ್ಷಗಳು ಮತ್ತು ಲಿಫ್ಟ್ ಯಂತ್ರವನ್ನು ಒದಗಿಸಿ ಅಳವಡಿಸುವುದಕ್ಕಾಗಿ ರೂ. 15.00 ಲಕ್ಷಗಳು ಹೀಗೆ ಒಟ್ಟು ರೂ. 20.87 ಲಕ್ಷದ ಅಂದಾಜು ಪಟ್ಟಿ ಮಂಜೂರಾಗಿದೆ.

ಜಿಲ್ಲಾ ಕಛೇರಿ ಕಟ್ಟಡದ ಮೂರನೇ ಹಂತದ ಹಾಮಗಾರಿಯನ್ನು 2ನೇ ಹಂತವೆಂದು ಪರಿಗಣಿಸಿದ್ದು, ಇದರ ಅಂದಾಜು ವೆಚ್ಚ ರೂ. 198.00 ಲಕ್ಷಗಳಾಗಿರುತ್ತದೆ. ಆಗತ್ಯ ಅನುದಾನಕ್ಕಾಗಿ ಕಂದಾಯ ಇಲಾಖೆಯೊಂದಿಗೆ ವ್ಯವಹರಿಸಲಾಗುತ್ತಿದೆ.

ವಾಣಿಜ್ಯ ತೆರಿಗೆಯಲ್ಲಿ ಬಾಕಿಯಿರುವ ಅಫೀಲುಗಳು.

1619(2275) ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) :— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ಮಾರಾಟ ಜಂಟಿ ವಾಣಿಜ್ಯ ತೆರಿಗೆ ಆಯುಕ್ತರು ಹಾಗೂ ಉಪ ವಾಣಿಜ್ಯ ಆಯುಕ್ತರು ಇವರುಗಳಲ್ಲಿ ದಿನಾಂಕ : 31-3-1999 ರವರೆಗೆ ಬಾಕಿ ಇರುವ ಒಟ್ಟು ಅಫೀಲುಗಳ ಸಂಖ್ಯೆ ಎಷ್ಟು ;

ಆ) ಈ ಅಫೀಲುಗಳು ಎಷ್ಟು ಸಮಯದಿಂದ ಬಾಕಿ ಇದೆ;

ಇ) ಈ ಅಫೀಲುಗಳನ್ನು ಶೀಘ್ರ ವಿಲೇವಾರಿ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯ ಮಂತ್ರಿಗಳು) :—

ಅ) ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಮನವಿ)- 4995

ವಾಣಿಜ್ಯ ತೆರಿಗೆ ಉಪ ಆಯುಕ್ತರು (ಮನವಿ)- 1063

ದಿನಾಂಕ: 31-3-99 ರಂದು ಇದ್ದಂತೆ :

ಕಛೇರಿ	6 ತಿಂಗಳಿಗಿಂತ ಕಡಿಮೆ	6 ತಿಂಗಳಿ ನಿಂದ 12 ತಿಂಗಳು	1 ವರ್ಷ ದಿಂದ	1 ವರ್ಷಕ್ಕೂ ಮೇಲ್ಪಟ್ಟು	ಒಟ್ಟು
ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಮನವಿ)	2613	1316	749	317	4995
ವಾಣಿಜ್ಯ ತೆರಿಗೆ ಉಪ ಆಯುಕ್ತರು (ಮನವಿ)	517	293	114	139	1063

ಇ) ಪ್ರತಿ ಅಧಿಕಾರಿಗೂ ಮಾಸಿಕ ಗುರಿ ನಿಗಧಿಪಡಿಸಿ ಅದರಂತೆ ಬಾಕಿಯಿರುವ ಅಪೀಲುಗಳನ್ನು ಶೀಘ್ರ ವಿಲೇವಾರಿ ಮಾಡಲು ಸೂಚಿಸಲಾಗಿದೆ.

ಖಾಸಗಿ ಐಟಿಐ ನೌಕರರಿಗೆ ಅನುದಾನ.

1606(2325) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) :— ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸರ್ಕಾರ ಶಾಲಾ ಕಾಲೇಜುಗಳಿಗೆ ಶೇಕಡಾ 100ರ ಅನುದಾನ ಮತ್ತು ನಿವೃತ್ತಿ ಸೌಲಭ್ಯಗಳನ್ನು ಕೊಡುತ್ತಿದ್ದು, ಖಾಸಗೀ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಕೊಡದಿರಲು ಕಾರಣವೇನು;

ಆ) ಶೇಕಡ 56ನ್ನು ಆಡಳಿತ ಸಂಸ್ಥೆ ನೀಡಬೇಕೆನ್ನುವುದು ನಿಜವೇ;

ಇ) ಹಾಗಿದ್ದಲ್ಲಿ, ಖಾಸಗೀ ಆಡಳಿತ ಸಂಸ್ಥೆ ಅಥವಾ ಸರ್ಕಾರ ಈ ವ್ಯವಸ್ಥೆಯನ್ನು ಸರಿಪಡಿಸುವುದೇ?

ಶ್ರೀ ಕೆ. ಅಮರ್‌ನಾಥ್ ಶೆಟ್ಟಿ (ಕಾರ್ಮಿಕ ರಾಜ್ಯ ಸಚಿವರು) :—

ಅ) ಶಾಲಾ ಕಾಲೇಜುಗಳನ್ನು ವೃತ್ತಿ ಶಿಕ್ಷಣ ಸಂಸ್ಥೆಗಳಿಗೆ ಹೋಲಿಸುವುದು ಸಮಂಜಸವಲ್ಲ. ಶಾಲಾ, ಕಾಲೇಜುಗಳಿಗೆ ಇರುವ ಅನುದಾನ ಸಂಹಿತೆ ಮತ್ತು ವೃತ್ತಿ ಶಿಕ್ಷಣಕ್ಕೆ ಇರುವ ಅನುದಾನ ಸಂಹಿತೆ ಬೇರೆ ಬೇರೆಯಾಗಿದೆ. ಆದುದರಿಂದ ಶಾಲಾ ಕಾಲೇಜುಗಳಿಗೆ ಕೊಡುವ ಶೇ.100 ಅನುದಾನ ಮತ್ತು ಇತರೆ ಸೌಲಭ್ಯಗಳನ್ನು ವೃತ್ತಿ ಶಿಕ್ಷಣ ಸಂಸ್ಥೆ (ಖಾಸಗಿ ಕೈಗಾರಿಕಾ ಸಂಸ್ಥೆ) ಗಳಿಗೆ ವಿಸ್ತರಿಸಲು ಸಾಧ್ಯವಿಲ್ಲ.

ಆ) ಹೌದು

ಇ) ಉದ್ಭವಿಸುವುದಿಲ್ಲ.